ಸಾಕ್ಷಿದಾರರಿಗೆ ಇಂದು ದಿನಾಂಕಃ 10-07-2024 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ 5 ರಿಂದ 9 ನೇ ಆರೋಪಿತರ ಪರ ಶ್ರೀಮತಿ. ಎ.ಎಸ್.ಎಸ್.(ಭಟ್) ವಕೀಲರಿಂದಃ**

ಆರೋಪಿತರು 2008-09 ನೇ ಇಸ್ವಿಯಿಂದ 2010 ನೇ ಇಸ್ವಿಯವರೆಗೆ ನೀವು ಹೇಳಿದ ಹಾಗೆ ಯಾವುದೇ ಹಾಜರಾತಿ ಪುಸ್ತಕಗಳನ್ನು ಸೃಷ್ಟಿಸಿಕೊಂಡಿರಲಿಲ್ಲ ಎಂದರೆ ಸಾಕ್ಷಿಯು ದಿಃ 01-03-2008 ರಿಂದ 29-12-2009 ರವರೆಗೆ ಒಂದು ಹಾಜರಿ ಪುಸ್ತಕವನ್ನು ಮತ್ತು ದಿಃ 01-03-2008 ರಿಂದ 30-01-2010 ರವರೆಗೆ ಇನ್ನೊಂದು ಹಾಜರಾತಿ ಪುಸ್ತಕವನ್ನು ಆರೋಪಿತರು ಸೃಷ್ಟಿಪಡಿಸಿರುತ್ತಾರೆ ಎಂದು ನುಡಿದಿರುತ್ತಾರೆ. ನೀವು ಈ ಮೇಲೆ ಹೇಳಿದ ದಿನಾಂಕಗಳ ಹಾಜರಾತಿ ಪುಸ್ತಕಗಳ ಮೇಲೆ ಸರ್ಕಾರಿ ಅಧಿಕಾರಿಗಳು ನಿಮ್ಮ ಶಾಲೆಗೆ ಭೇಟಿ ಕೊಟ್ಟು ತಮ್ಮ ಷರಾವನ್ನು ಬರೆದಿರುತ್ತಾರೆ ಎಂದರೆ ನಿಜ. ನೀವು ನಿಡಿ6 ರಂತೆ ಆದೇಶ ಮಾಡಿರುತ್ತೀರಿ ಎಂದರೆ ಸಾಕ್ಷಿಯು ಮ್ಯಾನುಪುಲೇಟ್ ಶಿಕ್ಷಕರು ಅದನ್ನು ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ. ನಿಪಿ3 ರಲ್ಲಿ ಸರ್ಕಾರಿ ಇಲಾಖಾ ಅಧಿಕಾರಿಗಳು ಯಾವುದೇ ಷರಾವನ್ನು ನಮೂದಿಸಿರುವುದಿಲ್ಲ ಎಂದರೆ ಸಾಕ್ಷಿಯು ದಿಃ 13-08-2009 ರಂದು ಚೀಫ್ ಎಕ್ಸಿಕ್ಯೂಟಿವ್ ಆಫೀಸರ್ ಜಿಲ್ಲಾ ಪಂಚಾಯ್ತು ರವರು ತಮ್ಮ ಷರಾವನ್ನು ಬರೆದಿರುತ್ತಾರೆ ಎಂದು ನುಡಿದಿರುತ್ತಾರೆ. ನೀವು ಆ ರೀತಿ ಹಾಜರಾತಿ ಪುಸ್ತಕಗಳನ್ನು ರದ್ದುಪಡಿಸಲು ಹೇಳಿ ನಿಪಿ3 ಮತ್ತು 4 ನೇದ್ದವುಗಳನ್ನು ನೀವೇ ಸೃಷ್ಟಿಸಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸದರಿಯವುಗಳಲ್ಲಿ ಶಿಕ್ಷಕರ ಹಸ್ತಾಕ್ಷರಗಳೇ ಇರುತ್ತವೆ ಎಂದು ನುಡಿದಿರುತ್ತಾರೆ. ನೀವು ಆರೋಪಿತರ ಬಳಿಯಿಂದ ಡೊನೆಶನ್ ನೆಪದಲ್ಲಿ ಒಬ್ಬೊಬ್ಬರ ಬಳಿಯಿಂದ 10 ಲಕ್ಷ ಮತ್ತು 15 ಲಕ್ಷ ಗಳಂತೆ ವಸೂಲಿ ಮಾಡಿರುತ್ತೀರಿ ಎಂದರೆ ಸರಿಯಲ್ಲ. ನೀವು ಹಣವನ್ನು ಕೊಟ್ಟವರ ಸಹಿಗಳನ್ನು ಒಂದು ರಿಜಿಸ್ಟರ್ ನಲ್ಲಿ ಮತ್ತು ಕೊಡದೇ ಇದ್ದವರ ಸಹಿಗಳನ್ನು ಇನ್ನೊಂದು ರಿಜಿಸ್ಟರ್ ನಲ್ಲಿ ಬಲಂತವಾಗಿ ಹಾಕಿಸಿಕೊಳ್ಳುತ್ತಿದ್ದಿರಿ ಎಂದರೆ ಸರಿಯಲ್ಲ. ನಿಮ್ಮ ಲೋಟಸ್ ಶಿಕ್ಷಣ ಸಂಸ್ಥೆಯ ಹಾಜರಾತಿ ಪುಸ್ತಕ (ನಿಪಿ3) ಅಲ್ಲವೇ ಅಲ್ಲ ಎಂದರೆ ಸರಿಯಲ್ಲ. ಅದರ ಮೂಲ ಹಾಜರಾತಿ ಪುಸ್ತಕದ ಆ ಇಸ್ವಿಯಲ್ಲಿ ಇಲಾಖಾ ಅಧಿಕಾರಿಗಳ ಷರಾ ಇದೆ ಎಂದರೆ ನಿಜ. ನೀವು ಎಲ್ಲಾ ಮೂಲ ಹಾಜರಾತಿ ಪುಸ್ತಕಗಳನ್ನು ರದ್ದುಪಡಿಸಲು ಆದೇಶ ಮಾಡಿ ಅವುಗಳನ್ನು ನಷ್ಟಗೊಳಿಸಿ ನಕಲಿ ಹಾಜರಾತಿ ಪುಸ್ತಕಗಳನ್ನು ಇರಿಸಿಕೊಳ್ಳಲು ಆದೇಶ ಮಾಡಿರುತ್ತೀರಿ ಎಂದರೆ ಸರಿಯಲ್ಲ. ಸದರಿ ಕೃತ್ಯದಿಂದ ಆರೋಪಿತರು ತಮ್ಮನ್ನು ತಾವು ರಕ್ಷಿಸಿಕೊಳ್ಳುವ ಸಲುವಾಗಿ ಒಂದು ಮೂಲ ಹಾಜರಾತಿ ಪುಸ್ತಕವನ್ನು ಸರ್ಕಾರಿ ಅಧಿಕಾರಿಗಳ ಮುಂದೆ ಹಾಜರುಪಡಿಸಿದ್ದರು ಎಂದರೆ ಸರಿಯಲ್ಲ. 2008 ನೇ ಇಸ್ವಿಯ ನವೆಂಬರ್ ತಿಂಗಳಿನ 10 ನೇ ತಾರೀಖಿನಂದು ಬಿ ಇ ಒ ರವರು ಶಾಲೆಗೆ ಭೇಟಿ ಕೊಟ್ಟು ಹಾಜರಾತಿ ಪುಸ್ತಕದ ಮೇಲೆ ಸಹಿ ಹಾಕಿರುತ್ತಾರೆ ಎಂದರೆ ಸಾಕ್ಷಿಯು ಆ ಹಾಜರಾತಿ ಪುಸ್ತಕವು ಶಿಕ್ಷಕರು ಸೃಷ್ಟಿಸಿಕೊಂಡಿದ್ದು ಆಗಿರುತ್ತದೆ ಎಂದು ನುಡಿದಿರುತ್ತಾರೆ. ಅದೇ ರೀತಿ 2008 ಡಿಸೆಂಬರ್ ತಿಂಗಳಲ್ಲಿ ವಿಶೇಷ ಅಧಿಕಾರಿಗಳಾದ ಉಪ

ನಿರ್ದೇಶಕರು, ಆಡಳಿತ ಸಾರ್ವಜನಿಕ ಶಿಕ್ಷಣ ಇಲಾಖೆ ಬಿಜಾಪುರ ರವರು ವಿಚಾರಣಾ ತಪಾಸಣಾ ಅಧಿಕಾರಿಯಾಗಿ ಬಂದು ತಮ್ಮ ಷರಾವನ್ನು ಹಾಜರಿ ಪುಸ್ತಕದ ಮೇಲೆ ಹಾಕಿರುತ್ತಾರೆ ಎಂದರೆ ಸಾಕ್ಷಿಯು ಕೇವಲ 2 ಹಾಜರಾತಿ ಪುಸ್ತಕಗಳಿದ್ದು ಅವುಗಳು ನಿಪಿ3 ಮತ್ತು 4 ಎಂದು ನಿಶಾನೆಗೊಂಡಿದ್ದು ಆರೋಪಿತರ ಪರ ವಕೀಲರು 3 ನೇ ಹಾಜರಾತಿ ಪುಸ್ತಕವನ್ನು ತೋರಿಸುತ್ತಿದ್ದಾರೆ ಎಂದು ನುಡಿದಿರುತ್ತಾರೆ. ದಿಃ 20-01-2009 ರಂದು ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರು ಅನಿರೀಕ್ಷಿತವಾಗಿ ಬೆಂಗಳೂರಿನಿಂದ ಬಂದು ನಿಮ್ಮ ಶಾಲೆಗೆ ತಪಾಸಣೆಗೆಂದು ಬಂದು ತಮ್ಮ ಷರಾವನ್ನು ಬರೆದಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ಎಲ್ಲಾ ಸರ್ಕಾರಿ ಅಧಿಕಾರಿಗಳು ತಮ್ಮ ಶಾಲೆಗೆ ಭೇಟಿ ಕೊಟ್ಟಾಗ ಶಾಲೆಯ ವಿಸಿಟರ್ಸ ಬುಕ್ ನಲ್ಲಿ ತಮ್ಮ ಷರಾಗಳನ್ನು ಹಾಕಿರುತ್ತಾರೆ ಎಂದರೆ ಸಾಕ್ಷಿಯು ಅಂತಹ ಪುಸ್ತಕಗಳು ನಮ್ಮ ಶಾಲೆಯಲ್ಲಿ ಇವೆ ಎಂದು ನುಡಿದಿರುತ್ತಾರೆ. ಆ ರೀತಿ ಇದ್ದ ವಿಸಿಟರ್ಸ ಪುಸ್ತಕಗಳನ್ನು ನಿಮ್ಮ ಸುಪರ್ದಿಗೆ ಪಡೆದು ಅವುಗಳನ್ನು ನಾಶಗೊಳಿಸಿರುತ್ತೀರಿ ಎಂದರೆ ಸರಿಯಲ್ಲ. ಸಾಕ್ಷಿಗೆ ಎಪ್ರಿಲ್ 2009 ನೇ ಹಾಜರಾತಿ ಪುಸ್ತಕವನ್ನು ತೋರಿಸಿದ್ದು, ಅದರಲ್ಲಿ ಕಾರ್ಯದರ್ಶಿಗಳೆಂದು ನಮೂದಿಸಿ ಹಾಕಿದ ಸಹಿ ನಿಮ್ಮದೆಯೇ ಎಂದು ಕೇಳಿದ್ದು, ಸಾಕ್ಷಿಯು ಅದನ್ನು ನೋಡಿ ನನ್ನದೇ ಸಹಿ ಇರುತ್ತದೆ ಎಂದು ನುಡಿದಿದ್ದು, ಸದರಿ ಹಾಜರಾತಿ ಪುಸ್ತಕವನ್ನು **ನಿಡಿ.7** ಎಂದು ಸಾಕ್ಷಿಯ ಸಹಿಯನ್ನು **ನಿಡಿ.7(ಎ)** ಎಂದು ಗುರುತಿಸಲಾಯಿತು. ನಿಡಿ7 ಹಾಜರಾತಿ ಪುಸ್ತಕವು ಮೂಲ ಹಾಜರಾತಿ ಪುಸ್ತಕವಿದ್ದು, ಅದರಲ್ಲಿ ಸರ್ಕಾರಿ ಅಧಿಕಾರಿಗಳ ಸಹಿ ಹಾಗೂ ನಿಮ್ಮ ಸಹಿ ಇದ್ದು, ನಿಪಿ3 ಇದು ನೀವು ಸೃಷ್ಟಿಸಿಕೊಂಡ ಹಾಜರಾತಿ ಪುಸ್ತಕ ಇದ್ದು, ಇದರಲ್ಲಿ ನಿಮ್ಮ ಹಾಗೂ ಸರ್ಕಾರಿ ಅಧಿಕಾರಿಗಳ ಸಹಿ ಇರುವುದಿಲ್ಲ ಎಂದರೆ ಸಾಕ್ಷಿಯು ನಿಪಿ3 ರಲ್ಲಿ ನನ್ನ ಸಹಿ ಇರುವುದಿಲ್ಲ ಎಂದು ನುಡಿದಿರುತ್ತಾರೆ. ನಿಪಿ2 ರಲ್ಲಿ ಸರ್ಕಾರಿ ಅಧಿಕಾರಿಗಳ ಸಹಿ ಇರುವುದಿಲ್ಲ ಎಂದರೆ ಸಾಕ್ಷಿಯು ಜುಲೈ 2008 ನೇ ಇಸ್ವಿಯಲ್ಲಿ ಹಾಜರಾತಿ ಪುಸ್ತಕದ ಮೇಲೆ ಉಪ ನಿರ್ದೇಶಕರು, ಆಯುಕ್ತರ ಕಾರ್ಯಾಲಯ ಶಿರಸಿ ಯವರು ತಮ್ಮ ಸಹಿಯನ್ನು ಹಾಕಿರುತ್ತಾರೆ ಎಂದು ನುಡಿದಿರುತ್ತಾರೆ. ಶಿಕ್ಷಕರೆಲ್ಲರೂ ನೀವು ಮಾಡುತ್ತಿರುವ ಅವ್ಯವಹಾರದ ಬಗ್ಗೆ ಡಿ ಡಿ ಪಿ ಐ ರವರಿಗೆ ದೂರನ್ನು ನೀಡಿ ಬಂದ ನಂತರ ನೀವು ನಿಪಿ2 ರಲ್ಲಿ ಅವರ ಸಹಿ ಹಾಕಿಸಿಕೊಂಡು ಬಂದಿರುತ್ತೀರಿ ಎಂದರೆ ಸರಿಯಲ್ಲ. ಆರೋಪಿತರೆಲ್ಲರೂ ನೀವು ನಿಮ್ಮ ಶಿಕ್ಷಣ ಸಂಸ್ಥೆಯಲ್ಲಿ ನಿಮಗೆ ಹೇಗೆ ಬೇಕೋ ಹಾಗೆ ವರ್ತಿಸುತ್ತಿದ್ದರಿಂದ ಅವರು ದೂರನ್ನು ಮಾಡಿದ್ದರಿಂದ ನಿಮ್ಮ ಶಿಕ್ಷಣ ಸಂಸ್ಥೆ ರದ್ದಾಗಿರುತ್ತದೆ ಎಂದರೆ ಸರಿಯಲ್ಲ. ನೀವು ಆರೋಪಿತರ ವಿರುದ್ಧ ಧಾರವಾಡದ ಆಯುಕ್ತರು, ಶಿಕ್ಷಣ ಇಲಾಖೆ ಯವರ ಮುಂದೆ ಪ್ರಕರಣ ಸಂಖ್ಯೆ 17/2015-16 ನ್ನು ದಾಖಲಿಸಿದ್ದು, ಸದರಿಯವರ ಬಳಿ ನಿಪಿ2 ಮತ್ತು 3 ನೇದ್ದವುಗಳನ್ನು ಹಾಜರುಪಡಿಸಿದ್ದೀರಿ ಎಂದರೆ ಸರಿಯಲ್ಲ. ನೀವು ಸದರಿ ಆಯುಕ್ತರ ಮುಂದೆ ಆರೋಪಿತರು ಬೇರೆ ಬೇರೆ ಹಾಜರಾತಿ ಪುಸ್ತಕಗಳನ್ನು ಇರಿಸಿಕೊಂಡಿದ್ದರೆಂದು ಕೇವಲ ಆರೋಪ ಮಾಡಿದ್ದೀರಿ ಎಂದರೆ ಸರಿಯಲ್ಲ. ನೀವು ಆರೋಪಿತರು ಹಾಜರಾತಿ ಪುಸ್ತಕಗಳನ್ನು ಸೃಷ್ಟಿಸಿಕೊಂಡಿರುತ್ತಾರೆ ಎಂದು ಆರೋಪಿಸಿದ್ದರ ಕುರಿತು ಯಾವುದೇ ಹಾಜರಾತಿ ಪುಸ್ತಕವನ್ನು ಆಯುಕ್ತರ ಮುಂದೆ ಹಾಜರುಪಡಿಸಿರುವುದಿಲ್ಲ ಎಂದರೆ ನಿಜ. ನೀವು, ಆರೋಪಿತರು ತಮಗೆ ಹೇಗೆ ಬೇಕೋ ಹಾಗೆ ಹಾಜರಾತಿ ಪುಸ್ತಕಗಳನ್ನು ಸೃಷ್ಟಿಸಿಕೊಂಡಿದ್ದಾರೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ಹಾಜರುಪಡಿಸಿದಂತಹ ನಿಪಿ2 ಮತ್ತು 3 ನೇದ್ದವುಗಳು ಮೂಲ ಹಾಜರಾತಿ ಪುಸ್ತಕಗಳು ಅಲ್ಲವೇ ಅಲ್ಲ ಎಂದರೆ

ಸರಿಯಲ್ಲ. ಆರೋಪಿತರು 2 ಹಾಜರಿ ಪುಸ್ತಕಗಳನ್ನು ಸೃಷ್ಟಿಸಿಕೊಂಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

2. ನೀವು ಆರೋಪಿತರ ಶಿಕ್ಷಕರಿಂದ ಅವರು ಅನುದಾನಿತ ಶಿಕ್ಷಕರಾದ ನಂತರವೂ ಸಹ ಅವರಿಂದ ಹಣ ವಸೂಲಿ ಮಾಡಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ನೀವು 4 ನೇ ಆರೋಪಿತರ ಬಳಿಯಿಂದ ದಿಃ 22-04-2010 ರಂದು ನಿಮ್ಮ ಸಿಂಡಿಕೇಟ್ ಬ್ಯಾಂಕಿನ ಖಾತೆಯಾದ ಖಾತಾ ಸಂಖ್ಯೆ 1202201004418 ಗೆ 1 ಲಕ್ಷ 20 ಸಾವಿರ ರೂಪಾಯಿ ಹಣವನ್ನು ಜಮೆ ಮಾಡಿಸಿಕೊಂಡಿರುತ್ತೀರಿ ಎಂದರೆ ಸಾಕ್ಷಿಯು ಅದು 4 ನೇ ಆರೋಪಿತರಿಗೆ ನಾನು ಕೊಟ್ಟಂತಹ ಸಾಲವನ್ನು ಅವರು ಆ ಖಾತೆಯ ಮುಖಾಂತರ ಮರುಪಾವತಿಸಿದ್ದಾಗಿರುತ್ತದೆ. ಅದೇ ಆರೋಪಿತರಿಂದ ದಿಃ 28-05-2010 ರಂದು ನಿಮ್ಮ ಖಾತೆಯಾದ ಕೆ ಡಿ ಸಿಸಿ ನಂ.292 ಕ್ಕೆ ಹಣವನ್ನು ಜಮೆ ಮಾಡಿಸಿಕೊಂಡಿರುತ್ತೀರಿ ಎಂದರೆ ಸಾಕ್ಷಿಯು ಅದು ಸಂಸ್ಥೆಯ ಖಾತೆ ಇದ್ದುದ್ದರಿಂದ ಅವರಾಗಿಯೇ ಹಣ ಜಮೆ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ. ಅದೇ ಶಿಕ್ಷಕರಿಂದ ದಿಃ 18-11-2011 ರಂದು ಸದರಿ ಕೆ ಡಿ ಸಿಸಿ ಖಾತೆ ನಂ. 292 ಕ್ಕೆ ಹಣವನ್ನು ಜಮೆ ಮಾಡಿಸಿಕೊಂಡಿರುತ್ತೀರಿ ಎಂದರೆ ಸಾಕ್ಷಿಯು ಮುಂದುವರೆದು ಅದನ್ನೂ ಸಹ ಸದರಿ ಆರೋಪಿತರು ತಾವಾಗಿಯೇ ಜಮೆ ಮಾಡಿದ್ದು ನಾವು ಯಾವುದೇ ಒತ್ತಾಯ ಮಾಡಿರುವುದಿಲ್ಲ ಎಂದು ನುಡಿದಿರುತ್ತಾರೆ. ಅದೇ ರೀತಿ 5 ನೇ ಆರೋಪಿತರ ಬಳಿಯಿಂದ ದಿಃ 16-11-2009 ರಂದು ನಿಮ್ಮ ಕೆ ಡಿ ಸಿಸಿ ಖಾತೆ ನಂ. 292 ಕ್ಕೆ ಹಣ ಜಮೆ ಮಾಡಿಸಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ನಂತರ ದಿಃ 19-11-2009 ಕ್ಕೆ ಎಸ್ ಬಿ ಐ ಬ್ಯಾಂಕ್ ಖಾತಾ ನಂ. 30960389216 ನೇದ್ದಕ್ಕೆ ಸದರಿ ಆರೋಪಿತರ ಬಳಿಯಿಂದ ಹಣವನ್ನು ಜಮೆ ಮಾಡಿಸಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ಅದೇ ಆರೋಪಿತರಿಂದ ದಿಃ 30-11-2009 ಕ್ಕೆ ಡಿಡಿ ನಂ.268377 ನೇದ್ದರ ಮೂಲಕ ಹಣವನ್ನು ಜಮೆ ಮಾಡಿಸಿಕೊಂಡಿರುತ್ತೀರಿ ಎಂದರೆ ಸಾಕ್ಷಿಯು ಯಾವುದೇ ಒತ್ತಡವಿಲ್ಲದೆ ಸದರಿ ಆರೋಪಿತರೇ ಹಣವನ್ನು ದೇಣಿಗೆ ರೂಪದಲ್ಲಿ ಜಮೆ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ. 8 ನೇ ಆರೋಪಿತನ ಬಳಿಯಿಂದ ದಿಃ 01-07-2009 ರಂದು ಡಿಡಿ ನಂ. 646312 ರ ಮೂಲಕ ಹಣವನ್ನು ಪಡೆದುಕೊಂಡಿರುತ್ತೀರಿ ಎಂದರೆ ಸಾಕ್ಷಿಯು ಸದರಿಯವರೂ ಸಹ ದೇಣಿಗೆ ರೂಪದಲ್ಲಿ ಕೊಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ. ದಿಃ 14-11-2009 ರಂದು ಸದರಿ ಆರೋಪಿತರ ಬಳಿಯಿಂದ ನಿಮ್ಮ ಎಸ್ ಬಿ ಐ ಖಾತೆಗೆ ಹಣವನ್ನು ಪಡೆದುಕೊಂಡಿರುತ್ತೀರಿ ಎಂದರೆ ಸಾಕ್ಷಿಯು ಸದರಿಯವರೇ ಯಾವುದೇ ಒತ್ತಾಯ ಇಲ್ಲದೇ ದೇಣಿಗೆಯಾಗಿ ಕೊಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ. ದಿಃ 21-08-2009 ರಂದು ಸದರಿ ಆರೋಪಿತರಿಂದ 95 ಸಾವಿರ ರೂಪಾಯಿ ನಗದು ಹಣವನ್ನು ಪಡೆದುಕೊಂಡು ಅವರಿಗೆ ವಂತಿಗೆ ರಶೀದಿ ಎಂದು ಕೊಟ್ಟಿರುತ್ತೀರಿ ಎಂದರೆ ನಿಜ. ಅದೇ ರೀತಿ 2 ನೇ ಆರೋಪಿತರ ಬಳಿಯಿಂದ ದಿಃ 14-11-2009 ರಂದು ನಿಮ್ಮ ಕೆ ಡಿ ಸಿ ಸಿ ಬ್ಯಾಂಕಿನ ಖಾತೆ ನಂ. 292 ಕ್ಕೆ 1 ಲಕ್ಷ ರೂಪಾಯಿ ಹಣ ಸಂದಾಯ ಮಾಡಿಸಿಕೊಂಡಿರುತ್ತೀರಿ ಎಂದರೆ ನಿಜ. ಆರೋಪಿತರ ಬಳಿಯಿಂದ ಅವರು ಅನುದಾನ ಶಿಕ್ಷಕರಾದ ನಂತರವೂ ಸಹ ಅವರ ಪ್ರತಿ ತಿಂಗಳ ಸಂಬಳದಲ್ಲಿ ಪ್ರತಿಶತ ದರದಲ್ಲಿ ಹಣವನ್ನು ಪಡೆದುಕೊಳ್ಳುತ್ತಿದ್ದೀರಿ ಎಂದರೆ ಸರಿಯಲ್ಲ. ಆರೋಪಿತರೆಲ್ಲರನ್ನೂ ಕರೆಯಿಸಿ ಅವರಿಗೆ

ನಿಮ್ಮನ್ನು ಕೆಲಸದಿಂದ ವಜಾ ಮಾಡುತ್ತೇವೆ ಎಂದು ಹೆದರಿಸಿ ಅವರುಗಳ ಬಳಿಯಿಂದ ಪತ್ರಗಳನ್ನು ಬರೆಯಿಸಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ನಿಪಿ5 ರಿಂದ 14 ರವರೆಗಿನ ಪತ್ರಗಳು ಆರೋಪಿತರ ಬಳಿಯಿಂದ ಹೆದರಿಸಿ ಬರೆಯಿಸಿಕೊಂಡಂತವುಗಳಾಗಿರುತ್ತವೆ ಎಂದರೆ ಸರಿಯಲ್ಲ. ಆರೋಪಿತರ ಬಳಿಯಿಂದ ಈ ಮೇಲೆ ಹೇಳಿದ ಹಣ ವಸೂಲಾತಿಗಾಗಿ ನಿಪಿ2 ಮತ್ತು 3 ನೇದ್ದವುಗಳನ್ನು ನೀವೇ ಆಡಳಿತ ಕಮಿಟಿಯ ವತಿಯಿಂದ ತಯಾರಿಸಿಕೊಂಡು ಅವರುಗಳ ಸಹಿಗಳನ್ನು ಪಡೆದುಕೊಂಡಿರುತ್ತೀರಿ ಎಂದರೆ ಸರಿಯಲ್ಲ. ನೀವು ನಿಮ್ಮ ಖಾಸಗಿ ಫಿರ್ಯಾದಿಯಲ್ಲಿ ಕಾಣಿಸಿದ ಸಂಗತಿಗಳು ಸೃಷ್ಟಿಸಿಕೊಂಡಿದ್ದವು ಗಳಾಗಿರುತ್ತವೆ ಎಂದರೆ ಸರಿಯಲ್ಲ. ನೀವು ಹೇಳಿದಂತಹ ಯಾವುದೇ ತಪ್ಪುಗಳನ್ನು ಎಸೆಗಿರುವುದಿಲ್ಲ ಎಂದರೆ ಸರಿಯಲ್ಲ. ಈಗಲೂ ಸಹ ಆರೋಪಿತ ಶಿಕ್ಷಕರು ಅನುದಾನಿತ ನೌಕರರಾಗಿ ಮುಂದುವರೆದುಕೊಂಡು ಬಂದಿರುತ್ತಾರೆ ಎಂದರೆ ನಿಜ. ಸರ್ಕಾರಿ ಅನುದಾನಿತ ನೌಕರರ ವಿರುದ್ಧ ದೂರನ್ನು ದಾಖಲಿಸಲು ನೀವು ಯಾವುದೇ ಮುಂಚಿತ ಪರವಾನಿಗೆಯನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸಾಕ್ಷಿಯು ಅದಕ್ಕಾಗಿ ಪರವಾನಿಗೆಯನ್ನು ಪಡೆಯುವ ಅವಶ್ಯಕತೆ ಇರುವುದಿಲ್ಲ ಎಂದು ನುಡಿದಿರುತ್ತಾರೆ.

**1 ರಿಂದ 4 ನೇ ಆರೋಪಿತರ ಪರ ವಕೀಲರು 5 ರಿಂದ 9 ನೇ ಆರೋಪಿತರ ಪರ ವಕೀಲರು ಮಾಡಿದ ಪಾಟೀ ಸವಾಲನ್ನೇ ಅಳವಡಿಸಿಕೊಂಡಿರುತ್ತಾರೆ.**

**ಮರು ವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ .ಹೇ.ಕೇ. ಸರಿ ಇದೆ

-Sd-

**ಪ್ರ.ದ.ನ್ಯಾ.ದಂ. ಮುಂಡಗೋಡ.**